REGD.NEWS PAPER RNI 50347/1989
RNI.Reg.No.KA/BGGPO/2516/2021-23
Licenced to post without Pre-payment
Registered Regn.No. PMG/BG/WPP-CO -1 /2021-2023
Posted at BANGALORE PSO, MYSORE ROAD,
BANGALORE – 560026

Date of publication 18th of every month
Permitted to post on 20th or 21st

ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ)

# ವಾರ್ತಾಪತ್ರ

ಕನ್ನಡ ಮಾಸ ಪತ್ರಿಕೆ

ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009
ದೂರವಾಣಿ : 080–22206151 – 22206152 – 22206153
Website: www.kavms.com E-mail: kavmss@gmail.com

ಸಂಪಾದಕರು:
ರಾ.ಪ. ರವಿಶಂಕರ್

ಕಾರ್ಯಾಲಯ ಸಮಯ { ವಾರದ ದಿನಗಳಲ್ಲಿ ಬೆಳಿಗ್ಗೆ : 10.30 ರಿಂದ ಸಂಜೆ: 5.30
ಭಾನುವಾರ : ಬೆ. 10.30 ರಿಂದ ಮಧ್ಯಾಹ್ನ : 3.00ರ ವರೆಗೆ

ಸಂಪುಟ : 36 ಜನವರಿ 2023 ಬೆಲೆ : 1 ರೂ. ಪುಟಗಳು : 4 ಸಂಚಿಕೆ : 01



## ಅಧ್ಯಕ್ಷರ ನುಡಿ



ಪ್ರೀತಿ ಪ್ರದರ್ಶನದ ವಸ್ತು ಅಲ್ಲ. ಪ್ರೀತಿ ಮಾನವ ಸಹಜವಾದ ಮೂಲ ಗುಣ. ಪ್ರೀತಿಸುವ ಗುಣವನ್ನು ನಾವು ಅಳವಡಿಸಿ ಕೊಳ್ಳದಿದ್ದರೆ, ನಮ್ಮ ಹತ್ತಿರ ಬೇರೆ ಏನಿದ್ದರೂ ವ್ಯರ್ಥ. ನಮ್ಮ ಹೃದಯದಲ್ಲಿ ಮೊದಲ ಸ್ಥಾನ ಪ್ರೀತಿ ವಿಶ್ವಾಸಗಳಿಗೆ ನೀಡಬೇಕು. ಪ್ರೀತಿ ಎಂದರೇ ನಾವು ಯಾರ ಜೊತೆ ಬದುಕುತ್ತೇವೆ ಎಂಬುದಲ್ಲ, ಯಾರನ್ನು ಬಿಟ್ಟು ಬದುಕೋಕಾಗಲ್ಲ ಅನ್ನುವ ಸ್ಥಿತಿ. ಪ್ರೀತಿ ಎನ್ನುವುದು ಜೀವನವನ್ನು ಸುಗಮಗೊಳಿಸುತ್ತದೆ, ಮನಸ್ಸಿನಲ್ಲಿ ಸುಖವನ್ನು ತುಂಬುತ್ತದೆ. ನಮ್ಮನ್ನು ಯಾರಾದರೂ ಪ್ರೀತಿ ಮಾಡುವವರು ಇದ್ದಾರೆಂದರೇ, ಜೀವನವು ಸಹ್ಯವೆನಿಸುತ್ತದೆ. ಪ್ರೀತಿಗೆ ಎಂದೂ ಅಪಜಯವಿಲ್ಲ, ಇಂದೋ ನಾಳೆಯೋ, ನಂತರವೋ ನಿಜವಾದ ಪ್ರೀತಿಗೆ ಜಯ ಕಟ್ಟಿಟ್ಟದ್ದು. ನಮ್ಮಲ್ಲಿ ಪರಿಶುದ್ಧ ಪ್ರೀತಿ ಇದೇ ಎಂದಾದರೆ ನಾವೇ ಸರ್ವಶಕ್ತರು. ನಮ್ಮನ್ನು ಯಾರೂ ಪ್ರೀತಿಸದಿದ್ದರೆ ಆ ತಪ್ಪು ನಮ್ಮದಲ್ಲದೆ ಬೇರೆಯವರದಲ್ಲ. ಏಕೆಂದರೆ ಪ್ರೀತಿಯನ್ನು ಯಾರು ನಮಗೆ ಉಚಿತವಾಗಿ ನೀಡುವುದಲ್ಲ. ಅದನ್ನು ನಾವೇ ಗಳಿಸಿಕೊಳ್ಳಬೇಕು. ಹೊಟ್ಟೆಯ ಹಸಿವನ್ನು ನೀಗಿಸುವುದು ಸುಲಭ. ಆದರೆ ಪ್ರೀತಿಯ ಹಸಿವನ್ನು ನೀಗಿಸುವುದು ಸುಲಭವಲ್ಲ.

ಪ್ರೀತಿ ಎನ್ನುವುದು ವಿಶ್ವ ವ್ಯಾಪಿ ಹಾಗೂ ಪರಿಶುದ್ಧವಾದುದು. ಪ್ರತಿಯೊಂದು ಜೀವರಾಶಿಗಳಲ್ಲಿ ಪ್ರೀತಿ ಇದ್ದೇ ಇದೆ. ಪ್ರೀತಿ ಇಲ್ಲದ ಜೀವವೇ ಇಲ್ಲ. ಅಂತಹ ಪ್ರೀತಿಯನ್ನು ನಾವು ಯಾರೊಂದಿಗೂ ಹಂಚಿಕೊಳ್ಳುವ ಮುನ್ನ ಹತ್ತು ಭಾರಿ ಆಲೋಚಿಸಿ ಹಂಚಿಕೊಳ್ಳಬೇಕು. ಯಾವುದೋ ಒಂದು ಆಕರ್ಷಣೆಗೆ ಪ್ರೀತಿ ಮಾಡುವುದು ತಪ್ಪು. ಒಮ್ಮೆ ಪ್ರೀತಿ ಮಾಡಿದೆವು ಅಂದರೆ ಅದು ಶಾಶ್ವತವಾಗಿರಬೇಕು. ಒಂದು ವೇಳೆ ನಾವು ಯಾವುದೇ ವ್ಯಕ್ತಿಯನ್ನು ದ್ವೇಷಿಸಿದರೂ ಪರವಾಗಿಲ್ಲ ಪ್ರೀತಿಸುವ ಹಾಗೆ ನಟಿಸಬಾರದು. ಕಾರಣ ಪ್ರೀತಿ ಸ್ಪಟಿಕದಂತೆ ಶುಭ್ರವಾದುದು, ಪರಿಶುದ್ಧವಾದ ಪ್ರೀತಿಯಲ್ಲಿ ಹೃದಯಗಳು ಮಾತನಾಡುತ್ತವೆ. ಮನಸ್ಸುಗಳು ಅರಳುತ್ತವೆ ಪ್ರೀತಿ ಪ್ರಕೃತಿಯಂತೆ ಯಾವ ಶಕ್ತಿಗೂ ಕಡಿಮೆಯಿಲ್ಲ. ಪ್ರೀತಿಗೆ ಯಾವುದೇ ಬೇದವೂ ಇಲ್ಲ ಜಾತಿ, ಮತ, ಮೇಲು ಕೀಳು, ಬಡವ, ಶ್ರೀಮಂತ, ವಯಸ್ಸು, ಬಣ್ಣ, ಯಾವುದೂ ಪ್ರೀತಿಗೆ ಅಡ್ಡಿ ಆಗುವುದಿಲ್ಲ. ಜೀವನ ಪರ್ಯಂತ ಅವಕಾಶ ದೊರೆತಷ್ಟು ಜನಗಳೊಂದಿಗೆ ಪ್ರೀತಿಯನ್ನು ಹಂಚಿಕೊಳ್ಳಿ. ಆದರೆ ನೀವು ಮಾಡಿದ ಪ್ರೀತಿಗೆ ಕಳಂಕ ಬರದಂತೆ ನಡೆದುಕೊಂಡರೆ ನೀವೊಬ್ಬ ಆದರ್ಶಕರಾಗುತ್ತೀರಿ. ಪ್ರೀತಿ ಪವಿತ್ರ ಮಂದಿರವಾಗಿದೆ. ಅಲ್ಲಿ ಆಲೋಚನೆಗಳು ಎಂದೂ ಒಳಿತಿನ ಬಗ್ಗೆ ಇರಲಿ. ಬಂಧುಗಳೇ, ಚಂದದ ಪ್ರೀತಿ ಇದ್ದರೆ ಗುಡಿಸಿನಲ್ಲಿಯೂ ನೆಮ್ಮದಿಯಿಂದ ಇರಬಹುದು. ಪ್ರೀತಿಯೇ ಇಲ್ಲದೆ ಹೋದರೆ ಅರಮನೆಯಲ್ಲಿದ್ದರೂ ಸಂತೋಷವಿರುವುದಿಲ್ಲ.

ಪ್ರೀತಿ ಸ್ನೇಹ ಇವೆರಡೂ ಮೇಲ್ನೋಟಕ್ಕೆ ಒಂದೇ ತೆರನಾಗಿ ಕೂಡಿ ಬಂದರೂ ನಿಜವಾಗಿಯೂ ಅದು ಬೇರೆ ಬೇರೆಯಾಗಿದೆ. ಸ್ನೇಹ ಎಲ್ಲಿದೆಯೋ ಅಲ್ಲಿ ಪ್ರೀತಿ ಇದ್ದೇ ಇದೆ ಅಂತ ಹೇಳುವುದಕ್ಕೆ ಸಾಧ್ಯವಿಲ್ಲ. ಸ್ನೇಹ ನೂರಾರು ಜನಗಳ ಹತ್ತಿರ ಇರಬಹುದು ಆದರೆ ಪ್ರೀತಿ ಕೆಲವರ ಮೇಲೆ ಮಾತ್ರ ಇರುತ್ತದೆ. ಸ್ನೇಹ ಪ್ರೀತಿ ಒಂದಾದಾಗ ಅವರನ್ನು ಆಪ್ತಮಿತ್ರ, ಗಾಡ ಸ್ನೇಹಿತ ಹೀಗೆ ಹತ್ತು ಹಲವು ವಿಧಗಳಲ್ಲಿ ನಾವು ಕರೆಯುತ್ತೇವೆ. ಒಂದು ಕಡೆ ಸ್ನೇಹ, ಸ್ನೇಹದಿಂದ ಪ್ರೀತಿ ಅಲ್ಲಿಂದ ಭಾಂದವ್ಯ ಗಟ್ಟಿಯಾಗುತ್ತದೆ, ವಿಶ್ವಾಸ ಮೂಡುತ್ತದೆ, ನಂತರ ಪರಸ್ಪರ ನಂಬಿಕೆ. ನಂಬಿಕೆ ಎಲ್ಲಿ ನಮ್ಮಿಂದ ದೂರ ಆಗುತ್ತೋ ಅಥವಾ ನಾವು ಅದನ್ನು ಕಳೆದುಕೊಂಡಾಗ ಅಲ್ಲಿ ಸ್ನೇಹ, ಪ್ರೀತಿ ಎರಡೂ ಇರುವುದಿಲ್ಲ. . ಒಬ್ಬ ವ್ಯಕ್ತಿ ಒಮ್ಮೆ ಜೀವನದಲ್ಲಿ ನಂಬಿಕೆ ಕಳೆದುಕೊಂಡರೆ ಅವನು ವ್ಯಾಪಾರಕ್ಕಾಗಲಿ, ವ್ಯವಹಾರಕ್ಕಾಗಲಿ, ಸ್ನೇಹಕ್ಕಾಗಲಿ ಅನರ್ಹರಾಗುತ್ತಾನೆ. ನೆನಪಿರಲಿ ಸ್ನೇಹ ಮನಸ್ಸಿನ ಆಸ್ತಿ, ಪ್ರೀತಿ ಹೃದಯದ ಆಸ್ತಿ, ಸಂಬಂಧ ಜೀವನದ ಆಸ್ತಿ

### ಸಂಬಂಧದೊಳಗಿನ ಭಾವನೆಗಳು

ಜನಿಸುವ ಮೊದಲ ಪಯಣದಲ್ಲಿ ಒಂಟಿಯಾಗಿ ಆಗಮಿಸುವ ನಾವು, ಅಂತಿಮ ಪಯಣದಲ್ಲಿ ಏಕಾಂಗಿಯಾಗಿಯೇ ಹೊರಡುತ್ತೇವೆ. ಇದರ ನಡುವಿನ ಬದುಕಲ್ಲಿ, ಹಲವರೊಡನೆ ಹಲವು ಕಾರಣಕ್ಕೆ ಹಲವು ರೀತಿಯಲ್ಲಿ ಬೆಸೆದಿರುತ್ತೇವೆ. ಈ ಬೆಸುಗೆಗೆ ಸುಂದರ ಹೆಸರೇ 'ಸಂಬಂಧ'.

ಸಾಮಾನ್ಯವಾಗಿ ಮನದೊಳಗೆ ಭಾವ ಸಂಚಲನ ಉಂಟು ಮಾಡುವ ಸಂಬಂಧಗಳೆಂದರೆ, ರಕ್ತ ಸಂಬಂಧಗಳು, ಸ್ನೇಹ ಸಂಬಂಧಗಳು, ಗುರು ಶಿಷ್ಯ ಸಂಬಂಧ, ಪ್ರೇಮ ಸಂಬಂಧ, ವಿವಾಹ ಸಂಬಂಧ ಇವುಗಳಲ್ಲದೆ ಆಕಸ್ಮಿಕವಾಗಿ ಏರ್ಪಡುವ ತಾತ್ಕಾಲಿಕ ಸಂಬಂಧಗಳು ಜೀವಮಾನ ಪೂರ್ತಿ ನೆನಪಟ್ಟುಕೊಳ್ಳುವಂತಹ ಭಾವ ಸಂಚಲನವನ್ನು ಉಂಟುಮಾಡಬಹುದು. ಸಂಬಂಧಗಳ ಒಳಗೆ ಹುಟ್ಟುವ, ಚಿಗುರುವ, ಬೆಳೆಯುವ, ಒಣಗಿ ಸಾಯುವ, ಭಾವಗಳು ಅನೇಕ. ಇಂತಹ ಭಾವಗಳು ಹಲವು ವಿಧದಲ್ಲಿ, ಹಲವು ಹೆಸರಲ್ಲಿ, ಮಾತುಗಳಲ್ಲಿ, ಕೃತಿಯಲ್ಲಿ ಸದಾ ವ್ಯಕ್ತವಾಗುತ್ತಲೇ ಇರುತ್ತದೆ. ಯಾವ ಸಂಬಂಧವಾದರೂ ಸರಿ, ಅನಿವಾರ್ಯಕ್ಕೋ, ಅಥವಾ ಒತ್ತಾಯಕ್ಕೋ ಒಲಿಸಿಕೊಳ್ಳಲು ಪ್ರಯತ್ನಿಸಬಾರದು ಅದು ಹೆಚ್ಚು ಸಮಯ ನಮ್ಮ ಜೊತೆ ಉಳಿಯಲಾರದು. ಸಂಬಂಧಗಳ ಒಳಗೆ ಯಾವೆಲ್ಲಾ ಭಾವನೆಗಳು ಹುಟ್ಟಬಹುದು, ಬೆಳೆದು ನಮ್ಮನ್ನು ಆವರಿಸಬಹುದು ಎಂದು ನೋಡುತ್ತಾ ಹೋದರೆ...

ನಾವು ಒಬ್ಬರಿಗೊಬ್ಬರು ಯಾವುದೋ ಕಾರಣಕ್ಕಾಗಿ ಬೆಸೆದಿದ್ದೇವೆ ಎಂಬುದು ನಮ್ಮೊಳಗೆ ಏಕತೆಯ ಭಾವ ತುಂಬುತ್ತದೆ. ನಾವು ನಮ್ಮವರು ಎಂಬುದು ಸಂಬಂಧದ ಆಪ್ತತೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ.

ಹೆತ್ತವರು, ಮತ್ತು ಮಕ್ಕಳ ನಡುವಿನ ವಾತ್ಸಲ್ಯದ ಅನುಬಂಧ ಸಹಜವಾದದ್ದು. ತಮ್ಮ ಕರುಳ ಕುಡಿಗಳಿಗೆ ಕಿಂಚಿತ್ತು ಕಷ್ಟವಾಗದಂತೆ, ಒಲವ ಧಾರೆಯನ್ನು ಹರಿಸಿ, ಸಾಕಿ ಬೆಳೆಸುವ ಉತ್ಸಾಹದ ಭಾವ ಹೆತ್ತವರಲ್ಲಿ, ಒಡಹುಟ್ಟಿದವರು, ಕುಟುಂಬ ಸದಸ್ಯರು, ಪರಿಚಿತರು, ನೆರೆಹೊರೆಯವರು, ಸ್ನೇಹಿತರು ಹೀಗೆ ಜೀವವೊಂದು, ಹಲವು ಜೀವಗಳೊಡನೆ ಪ್ರೇಮ ಸಂಬಂಧಗಳನ್ನು ಏರ್ಪಡಿಸಿಕೊಂಡಿರುತ್ತದೆ.

ಹಾಗೆಯೇ ಒಂದು ಗಂಡು ಮತ್ತು ಹೆಣ್ಣು ಪರಸ್ಪರ ಆಕರ್ಷಿತರಾಗಿ, ಪ್ರೀತಿ ಪ್ರೇಮ ಎಂಬ ಅವಿನಾಭಾವ ಸಂಬಂಧದೊಳಗೆ ಬಂಧಿಯಾಗಿ ಬಿಡುತ್ತಾರೆ. ಇದೊಂದು ಪದಗಳಲ್ಲಿ ವರ್ಣನೆಗೆ ನಿಲುಕದ ಅವ್ಯಕ್ತ ತುಡಿತ ಮಿಡಿತಗಳನ್ನು ಮಿಡಿಯುವ ಹೃದಯ ಬಡಿತದಲ್ಲಿ ಮಿಳಿತವಾಗಿರುವ ತಾದಾತ್ಮ್ಯ ಭಾವ. ಕೇವಲ ಸಂಬಂಧವಿದೆ ಎಂಬ ಮಾತ್ರಕ್ಕೆ ಸಂಬಂಧ ಗಟ್ಟಿಯಾಗುವುದಿಲ್ಲ ಊರ್ಜಿತವಾಗುವುದಿಲ್ಲ. ಕಾಲಕಾಲಕ್ಕೆ ಪೋಷಿಸಿದರೆ ಮಾತ್ರ ಅದು ಸದಾ ಹಸಿರಾಗಿ ನಳನಳಿಸುವುದು. ಹಾಗಾಗಬೇಕಾದರೆ ನಮ್ಮ ಕಾಳಜಿ ಮತ್ತು ಆರೈಕೆ ಸದಾ ಅವಶ್ಯ.

ಸಂಬಂಧವೊಂದನ್ನು ಉಳಿಸುವಲ್ಲಿ ವಿಶ್ವಾಸದ ಪಾತ್ರ ಹಿರಿದಾದುದು. ನಂಬಿಕೆ ಯಾವುದೇ ಸಂಬಂಧದ ತಳಹದಿ. ಅದರ ಮೇಲೆಯೇ ಸಂಬಂಧವೆಂಬ ಕಟ್ಟಡದ ಗೋಡೆಗಳು ಬೆಳೆಯುತ್ತಾ ಹೋಗುತ್ತವೆ. ನಂಬಿಕೆಗೆ ವಿಶ್ವಾಸಕ್ಕೆ ಪೆಟ್ಟಾದರೆ ಕಟ್ಟಡ ಕುಸಿಯಬಹುದು ಸಂಬಂಧಗಳು ಅರ್ಥಹೀನವಾಗಿ ಬದಲಾಗಬಹುದು.

ನಂಬಿಕೆ ಎನ್ನುವುದು ಯಾವುದೇ ಸಂಬಂಧವನ್ನು ಆಪ್ತತೆಯ ಪರಮಾವಧಿಗೆ ಕೊಂಡೊಯ್ಯಬಲ್ಲದು ಅದೇ ರೀತಿ ನಂಬಿಕೆ ಕಳೆದುಕೊಂಡರೆ ಸಂಬಂಧ ಅಧಃಪತನಕ್ಕೆ ಜಾರಬಹುದು. ಜೀವನದಲ್ಲಿ ಹೊಂದಾಣಿಕೆ ಎಷ್ಟು ಮುಖ್ಯವೋ ಅರ್ಥ ಮಾಡಿಕೊಳ್ಳುವ ಮನಸ್ಸು ಅಷ್ಟೇ ಮುಖ್ಯ.

ಪರಸ್ಪರ ವ್ಯಕ್ತಿತ್ವದ ಮೇಲೆ ಕೆಸರೆರಚಿಕೊಳ್ಳದೆ ಗೌರವವನ್ನು ಕೊಟ್ಟು ತೆಗೆದುಕೊಳ್ಳುವ ನಡವಳಿಕೆ ಮತ್ತು ಉದಾತ್ತ ಮನಸ್ಥಿತಿ ಸಂಬಂಧಗಳ ಗೌರವ ಮತ್ತು ಬೆಲೆಯನ್ನು ಹೆಚ್ಚಿಸುತ್ತದೆ. ಸಂಬಂಧದೊಳಗಿನ ಪಾವಿತ್ರ್ಯತೆಯನ್ನು ಕಾಪಾಡಲು ನೆರವಾಗುತ್ತವೆ. ಆದರೆ ಕಾಮಕ್ಕೆ – ಕಣ್ಣು, ನಾಚಿಕೆ, ವಿವೇಕ, ವಿವೇಚನೆ, ಲೋಕದ ಪ್ರಜ್ಞೆ, ನ್ಯಾಯ ಅನ್ಯಾಯಗಳ ವಿಶ್ಲೇಷಣಾ ಶಕ್ತಿ

ಮುಂದುವರಿಯುವುದು.. ಪುಟ 4ಕ್ಕೆ

# ಆಧ್ಯಾತ್ಮಿಕ ಲೋಕದಲ್ಲಿ ಝೇಂಕರಿಸಿದ ನಾಗಕನ್ಯೆ ಶ್ರೀವಾಸವಿ




ನಾಗಕನ್ಯೆ ಶ್ರೀವಾಸವಿ ಮಹಾ ಯಜ್ಞದ ಉದ್ಘಾಟನೆ ಮಾಡುತ್ತಿರುವ ಪೂಜ್ಯಶ್ರೀ ಸಚ್ಚಿದಾನಂದ ಸರಸ್ವತಿಯವರು ಮತ್ತು ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಶ್ರೀ ಕೋಟಾ ಶ್ರೀನಿವಾಸ್ ಪೂಜಾರ್ ಹಾಗೂ ಸಂಘದ ಪದಾಧಿಕಾರಿಗಳು

ದೇವಸ್ಥಾನ ಎಂದ ಕೂಡಲೇ ನಮ್ಮ ಕಣ್ಮುಂದೆ ಬರುವುದು, ಗರ್ಭಗುಡಿ, ಪೂಜೆ, ಹೋಮ, ಮಂಗಳಾರತಿ ಇಂತಹ ಧಾರ್ಮಿಕ ಚಟುವಟಿಕೆಗಳೇ, ಆದರೆ ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ ನಮಗೆ ತಿಳಿಯುತ್ತದೆ. ದೇವಸ್ಥಾನ ಎಂದರೇ ಕೇವಲ ಆರಾಧನೆಯ ಕೇಂದ್ರವಲ್ಲ, ದೇವಾಲಯ ಕಲೆ, ಸಾಹಿತ್ಯ, ಸಂಸ್ಕೃತಿ, ಸಂಸ್ಕಾರ, ಸಮಾಜ ಸೇವೆ, ಮಾರ್ಗದರ್ಶನ ಕೇಂದ್ರ, ಸಂಘಟನಾ ಕೇಂದ್ರ, ಶಕ್ತಿ ಕೇಂದ್ರ ಆಗಿರುತ್ತದೆ. ಯಾವ ದೇವಾಲಯಗಳಲ್ಲಿ ಧಾರ್ಮಿಕ ಕಾರ್ಯಕ್ರಮಗಳ ಜೊತೆ ಜೊತೆಗೆ ಸಂಸ್ಕಾರ ನೀಡುವ ಕಾರ್ಯಕ್ರಮಗಳು ನಡೆಯುತ್ತವೋ ಅಂತಹ ದೇವಾಲಯಗಳು ಸಂಸ್ಕಾರ ಕೇಂದ್ರಗಳಾಗಿ, ಸೇವಾ ಕೇಂದ್ರಗಳಾಗಿ ಧರ್ಮ ಜಾಗೃತಿಯೊಂದಿಗೆ ಮಾನವೀಯ ಮೌಲ್ಯಗಳನ್ನು ಬಿತ್ತುವ ಶ್ರದ್ಧಾ ಕೇಂದ್ರಗಳಾಗಿ ಸಮಾಜದ ಶಕ್ತಿ ಕೇಂದ್ರಗಳಾಗಿ ಬಿಂಬಿಸುತ್ತದೆ ಮತ್ತು ದೇಶ ಕಟ್ಟುವ ಮನಸ್ಸು, ಹೃದಯಗಳನ್ನು ಸೃಷ್ಟಿಸುವ ಪವಿತ್ರ ಕ್ಷೇತ್ರವಾಗಿ ಕಂಗೊಳಿಸುತ್ತದೆ.

ತಲತಲಾಂತರಗಳಿಂದ, ಸಾವಿರಾರು ವರುಷಗಳಿಂದ ನೂರಾರು ಕೋಟಿ ಆಸ್ತಿಕ ಭಾಂದವರು ಕಾನನದಿಂದ – ನಾಡಿನವರೆವಿಗೂ ಸಾವಿರಾರು ದೇವಾನು ದೇವತೆಗಳಿಗೆ ಲಕ್ಷ ಲಕ್ಷ ಸಂಖ್ಯೆಯ ದೇವಾಲಯಗಳನ್ನು ನಿರ್ಮಾಣ ಮಾಡಿದ್ದಾರೆ. ಹಲವಾರು ದೇವಾಲಯಗಳಲ್ಲಿ ಧಾರ್ಮಿಕ ಹಾಗೂ ಸೇವಾ ಕಾರ್ಯಕ್ರಮಗಳ ಮೂಲಕ ದೇವಾಲಯಗಳ ಕಾರ್ಯಕ್ರಮಗಳು ಸದಾ ಕ್ರಿಯಾಶೀಲವಾಗಿದ್ದು, ಸಾವಿರಾರು ಸಂಖ್ಯೆಯ ಆಸ್ತಿಕ ಬಂಧುಗಳ ಹೃದಯಕ್ಕೆ ಹತ್ತಿರವಾಗಿದೆ. ಇನ್ನೂ ಹಲವು ದೇವಾಲಯಗಳು ಪೂಜೆ ಪುನಸ್ಕಾರಗಳಿಗೆ ಮೀಸಲಾಗಿ ಸಾವಿರಾರು ಭಕ್ತಾದಿಗಳ ಮನಸ್ಸಿಗೆ ನೆಮ್ಮದಿ ನೀಡುತ್ತಿದೆ, ಇನ್ನೂ ಕೆಲವು ದೇವಾಲಯಗಳು ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ, ವೈದ್ಯಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ಸಂಸ್ಕಾರಯುತವಾಗಿ ಕಾರ್ಯನಿರ್ವಹಿಸುತ್ತಾ ಲಕ್ಷ ಲಕ್ಷ ಸಂಖ್ಯೆಯ ನಾಗರೀಕರ ಹೃದಯ ಮಂದಿರಗಳಲ್ಲಿ ನೆಲೆಸಿದೆ. ಧರ್ಮ ಜಾಗೃತಿಯೊಂದಿಗೆ ಸಾಮಾಜಿಕ ಕ್ರಾಂತಿಯನ್ನು ಮೂಡಿಸಿ ದೇಶ ಕಟ್ಟುವ ಜಾಗೃತ ಮನಸ್ಸುಗಳನ್ನು ಒಂದೆಡೆ ಸೇರಿಸಿ ನವ ಸಮಾಜ ನಿರ್ಮಾಣಕ್ಕೆ ಸದಾಕಾಲ ಕಾರ್ಯನಿರ್ವಹಿಸುತ್ತಿದೆ.

ಸಂಸ್ಕಾರಯುತ ಪೀಳಿಗೆಯ ನಿರ್ಮಾಣ, ತನ್ಮೂಲಕ ಮಾನವ ಸೇವೆ –ಮಾದವ ಸೇವೆ ಎಂದು ಕಾರ್ಯ ನಿರ್ವಹಿಸುತ್ತಿರುವ ಕೆಲವೇ ಕೆಲವು ದೇವಾಲಯಗಳ ಪೈಕಿ ಬೆಂಗಳೂರು ಮಹಾನಗರದ ಮಲ್ಲೇಶ್ವರದಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ದೇವಾಲಯವೂ ಸಹ ಒಂದಾಗಿದೆ ಎಂದು ತಿಳಿಸಲು ಸಂತೋಷವಾಗುತ್ತದೆ.

ನಮ್ಮ ರಾಜ್ಯದಲ್ಲಿ ಮಾತ್ರವೇ ಸರಿ ಸುಮಾರು 266 ವಾಸವಿ ದೇವಾಲಯಗಳು ಇವೆ, ಆಂದ್ರ, ತೆಲಂಗಾಣ, ತಮಿಳುನಾಡು, ಕೇರಳ, ಮಹಾರಾಷ್ಟ್ರ, ಒರಿಸ್ಸಾ ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 1000 ಶ್ರೀ ವಾಸವಿ ದೇವಾಲಯಗಳು ಇದ್ದರೂ ವಿಶೇಷತೆಗೆ, ವೈಶಿಷ್ಟ್ಯಪೂರ್ಣ ಸೇವೆಗಳಿಗೆ, ಜಾತ್ಯಾತೀತವಾಗಿ ಭಕ್ತಾದಿಗಳನ್ನು ಆಕರ್ಷಿಸುತ್ತಾ, ವರ್ಷದ 365 ದಿನಗಳೂ ಸಹ ದೇವಾಲಯಗಳ ಧಾರ್ಮಿಕ ಸೇವೆಗಳಿಗೆ ಜೊತೆ ಜೊತೆಯಾಗಿ ಸೇವಾ ಕಾರ್ಯಕ್ರಮಗಳನ್ನು ಮತ್ತು ಕಲೆ ಸಾಹಿತ್ಯಗಳನ್ನು ಬಿಂಬಿಸುವ ವೈವಿಧ್ಯ ಕಾರ್ಯಕ್ರಮಗಳನ್ನು ನಡೆಸುವ ಏಕಮಾತ್ರ ದೇವಾಲಯ ಎಂದರೇ ಬೆಂಗಳೂರು ನಗರದ ಮಲ್ಲೇಶ್ವರದಲ್ಲಿರುವ **ಶ್ರೀ ಕನ್ಯಕಾಪರಮೇಶ್ವರಿ ದೇವಾಲಯ** ಎಂದು ತಿಳಿಸಲು ಅತೀವ ಸಂತೋಷವಾಗುತ್ತದೆ.

13/05/1934ರಲ್ಲಿ ಬೆಂಗಳೂರು ನಗರ, ಮಲ್ಲೇಶ್ವರ ಬಡಾಣೆಯ ಪ್ರತಿಷ್ಠಿತ ವಾಣಿಜ್ಯ ಕೇಂದ್ರವಾಗಿರುವ 8ನೇ ಅಡ್ಡರಸ್ತೆಯಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವ ಈ ದೇವಾಲಯದ ಆವರಣ ಶ್ರೀಕಂಠೇಶ್ವರ ಸ್ವಾಮಿ, ಶ್ರೀದೇವಿ ಭೂದೇವಿ ಸಮೇತ ಶ್ರೀ ಸತ್ಯನಾರಾಯಣ ಸ್ವಾಮಿ, ಶ್ರೀ ಮಹಾಗಣಪತಿ ಸಮೇತ ನವಗ್ರಹಗಳನ್ನೊಳಗೊಂಡ ದೇವಾಲಯ ಇದಾಗಿದೆ. ವರ್ಷದಲ್ಲಿ ಹತ್ತು ಹಲವು ಕಾರ್ಯಕ್ರಮಗಳ ಮೂಲಕ ಚಟುವಟಿಕೆ ಯುಕ್ತ ಕೇಂದ್ರವಾಗಿರುವ ಈ ದೇವಾಲಯ ಹತ್ತು ಹಲವು ಸಾಮಾಜಿಕ ಕ್ರಾಂತಿಗಳನ್ನು ಮಾಡಿ ಜನತೆಯ ಹೃದಯ ಮಂದಿರದಲ್ಲಿ ಸ್ಥಾನ ಪಡೆದಿದೆ. ಶ್ರೀ ಕನ್ಯಕಾಪರಮೇಶ್ವರಿ ದೇವಿಗೆ ವಿಶ್ವದಲ್ಲಿ ಬ್ರಹ್ಮರಥೋತ್ಸವ ನಡೆಯುವ ಏಕೈಕ ಸ್ಥಳ ಮಲ್ಲೇಶ್ವರ, ಬೆಂಗಳೂರು. ದಿನಾಂಕ 25/12/2022ರಂದು ನಡೆದ 10ನೇ ಬ್ರಹ್ಮರಥೋತ್ಸವದ ಅಂಗವಾಗಿ ನಡೆದ ನಾಗಕನ್ಯೆ ಶ್ರೀ ವಾಸವಿ ಎಂಬ ಯಜ್ಞ ಧಾರ್ಮಿಕ ಜಗತ್ತಿಗೆ ಕಳಸ ಪ್ರಾಯವಾಗಿತ್ತು. ಆಸ್ತಿಕ ಭಾಂದವರ ನೆಮ್ಮದಿಗೆ, ಭಾವನೆಗಳಿಗೆ ಸ್ಪಂದಿಸಿ ಭಕ್ತ ಸಾಗರದಿಂದ ಶುದ್ದ ಭಕ್ತಿಯ ಸಮರ್ಪಣೆಯಾಯಿತು.

## ನಾಗಕನ್ಯೆ – ಶ್ರೀ ವಾಸವಿ

2022ರ ಡಿಸೆಂಬರ್ 16ರಿಂದ ಜನವರಿ 2, 2023ರವರೆವಿಗೂ 18 ದಿನಗಳ ನಿರಂತರವಾಗಿ ನಡೆದ ಅಭೂತಪೂರ್ವ ಮಹಾಯಜ್ಞ ಧಾರ್ಮಿಕ ಜಗತ್ತಿಗೆ ಮಲ್ಲೇಶ್ವರಂ ಆರ್ಯವೈಶ್ಯ ಸಂಘ ನೀಡಿದ ಅಮೋಘ ಕೊಡುಗೆ ಎಂದರೇ ತಪ್ಪಾಗಲಾರದು.


ದಿನಾಂಕ 16/12/2022ರ ಶುಕ್ರವಾರದಂದು ವಾಸವಿ ಪೀಠದ ಪೀಠಾಧಿಪತಿಗಳಾದ **ಪೂಜ್ಯ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿಯವರು** ಮತ್ತು ಕರ್ನಾಟಕ ಘನ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಮಾನ್ಯ ಸಚಿವರಾದ **ಶ್ರೀ ಕೋಟಾ ಶ್ರೀನಿವಾಸ ಪೂಜಾರ್** ರವರು ನಾಗಕನ್ಯೆ ಶ್ರೀ ವಾಸವಿ ಕಲಾಕೃತಿಯನ್ನು ಲೋಕಾರ್ಪಣೆ ಮಾಡಿದರು. ದಿನಾಂಕ 25/12/2022ರಂದು ಉನ್ನತ ಶಿಕ್ಷಣ ಸಚಿವರಾದ ಸನ್ಮಾನ್ಯ **ಡಾ॥ ಸಿ ಎನ್ ಅಶ್ವತ್ಥನಾರಾಯಣರವರು** ದೇವಾಲಯಕ್ಕೆ ಆಗಮಿಸಿ ಶ್ರೀಮಾತೆಯ ಆಶೀರ್ವಾದವನ್ನು ಪಡೆದರು. 31/12/2022ರಂದು ಮಾನ್ಯ ಸಂಸದರಾದ **ಶ್ರೀ ಪಿ ಸಿ ಮೋಹನ್** ಹಾಗೂ ಶಾಸಕರಾದ **ಶ್ರೀ ಡಿ ಎಸ್ ಅರುಣ್‌ರವರು** ದೇವಾಲಯಕ್ಕೆ ಆಗಮಿಸಿ ವ್ಯವಸ್ಥೆಗಳನ್ನು ಕಂಡು ಆನಂದಿಸಿ ಶುಭ ಹಾರೈಸಿದರು.

ಶ್ರೀವಾಸವಿ ಮಾತೆಗೆ, 21,000ಲೀ ಹಾಲಿನಿಂದ ಮಹಾಕ್ಷೀರಾಭಿಷೇಕ, ಸಪ್ತ ಸಾಗರಗಳ ಪವಿತ್ರ ಜಲದಿಂದ ಕುಂಭಾಭಿಷೇಕ, ಕ್ಷೀರ ಸಾಗರದಲ್ಲಿ ತೆಪ್ಪೋತ್ಸವ, ವಿವಿಧ ಪವಿತ್ರ ಕ್ಷೇತ್ರಗಳಿಂದಲೇ ದೇವರುಗಳನ್ನು, ಅರ್ಚಕರನ್ನು ಕರೆಸಿ ಸಪ್ತ ಕಲ್ಯಾಣೋತ್ಸವಗಳ ಆಚರಣೆ, ಹರಿದ್ವಾರದಿಂದ ಬೆಂಗಳೂರು ನಗರದವರೆವಿಗೂ ಪವಿತ್ರ ಗಂಗಾಜಲವನ್ನು ಹರಿಸಿ, ಕಾಶಿಯಿಂದ ಅರ್ಚಕ ಪಂಡಿತರನ್ನು ಕರೆಸಿ ನಡೆಸಿದ ಗಂಗಾ ಆರತಿ, ಸಾಗರಕನ್ಯೆ ಶ್ರೀ ವಾಸವಿ ಇತ್ಯಾದಿ ಇತ್ಯಾದಿ ಮಹೋನ್ನತ ಸೇವೆಗಳನ್ನು ಜಗನ್ಮಾತೆ ಶ್ರೀ ಕನ್ಯಕಾಪರಮೇಶ್ವರಿ ದೇವಿಗೆ ಸಲ್ಲಿಸುವ ಮೂಲಕ ಈ ನೆಲದ ಸಂಸ್ಕೃತಿಗೆ ಸಂಸ್ಕಾರಕ್ಕೆ, ವಿಶೇಷ ಕೊಡುಗೆಗಳನ್ನು ನೀಡಿರುವ ಮಲ್ಲೇಶ್ವರಂ ಆರ್ಯವೈಶ್ಯ ಸಂಘ ದೇಶ ವಿದೇಶಗಳಲ್ಲಿ ಅಸಂಖ್ಯಾತ ಶ್ರೀ ಕನ್ಯಕಾಪರಮೇಶ್ವರಿ ದೇವಿಯ ಭಕ್ತ ಸಮೂಹವನ್ನು ಹೊಂದಿದೆಯೆಂದು ತಿಳಿಸಲು ಹೃದಯ ತುಂಬಿ ಬರುತ್ತದೆ.

10ನೇ ಬ್ರಹ್ಮರಥೋತ್ಸವದ ಅಂಗವಾಗಿ ನಡೆದ ನಾಗಕನ್ಯೆ ಶ್ರೀವಾಸವಿ ಎಂಬ ವಿಶೇಷ ಕಲ್ಪನೆಯ ಭಕ್ತಿ ಸಮರ್ಪಣಾ ಮಹಾಯಜ್ಞ ಕೋಟಿ ಕೋಟಿ ಜನಗಳಿಂದ ವೀಕ್ಷಿಸಲ್ಪಟ್ಟಿದೆ. ಲಕ್ಷ ಲಕ್ಷ ಭಕ್ತಾದಿಗಳಿಗೆ ದರ್ಶನ ಭಾಗ್ಯ ನೀಡಿದೆ. ಸಂಪೂರ್ಣ ದೇವಾಲಯವನ್ನೇ ಒಂದು ಹುತ್ತದೊಳಗೆ ಇರುವಂತೆ ನಿರ್ಮಾಣ ಮಾಡಲಾಗಿತ್ತು. ಕನ್ನಡ ಚಿತ್ರರಂಗದ ಹೆಸರಾಂತ ಕಲಾನಿರ್ದೇಶಕ ಶ್ರೀ ವಸಂತರಾವ್ ಕುಲಕರ್ಣಿ ಹಾಗೂ ತಂಡದವರಿಂದ 78 ದಿನಗಳ ಕಾಲ ನಡೆದ ಕಲಾಕೃತಿ ಕಾಮಗಾರಿಗಳಲ್ಲಿ 50ಕ್ಕೂ ಹೆಚ್ಚು ಕುಶಲ ಕರ್ಮಿಗಳ ನಿರಂತರ ಪರಿಶ್ರಮದಿಂದ ಮೂಡಿ ಬಂದಿದ್ದ ನಾಗಲೋಕ ಕಲಾಕೃತಿಯನ್ನು ನೋಡಿ ಆನಂದಿಸಿದ ಕಣ್ಣುಗಳೇ ಧನ್ಯ.

ಪ್ರವೇಶ ದ್ವಾರದಲ್ಲಿಯೇ ಸುಮಾರು 70 ಅಡಿ ಅಗಲದ ಬೃಹತ್ ಹುತ್ತದಿಂದ ಎದ್ದು ಬಂದಂತಿರುವ ಪಂಚ ಹೆಡೆಗಳ ಬೃಹತ್ ನಾಗಸರ್ಪ ಭಕ್ತಾಧಿಗಳನ್ನು ಸ್ವಾಗತಿಸುತ್ತಿತ್ತು. ಪ್ರವೇಶ ದ್ವಾರದಿಂದ ಒಳಗೆ ಬಂದ ಕೂಡಲೆ ಸುಮಾರು 10,000 ಚದುರ ಅಡಿಗಳ ವಿಸ್ತಾರವಾದ ಬೃಹತ್ ಹುತ್ತದಲ್ಲಿ ಭಕ್ತಾಧಿಗಳು ಸರಿ ಸುಮಾರು 150 ಅಡಿಗಳ ದೂರವನ್ನು ಪುಂಗೀನಾದಗಳನ್ನು ಆಸ್ವಾದಿಸುತ್ತಾ, ಹಾವುಗಳ ಬುಸ್-ಬುಸ್ ಶಬ್ದವನ್ನು ಆಲಿಸುತ್ತಾ ಸಾಗಿದರೆ ಅಂತ್ಯದಲ್ಲಿ ನಾವು ಸೇರುವುದೇ ಪ್ರಕೃತಿಯ ವನಸಿರಿಯಿಂದ ಸಮೃದ್ಧವಾಗಿ, ಕಣ್ಣು ಕೋರೈಸುವಂತೆ ಆಧ್ಯಾತ್ಮ ನಾಗಲೋಕದ ಅನುಭವವನ್ನು ನೀಡುತ್ತಿದ್ದ ವೈಭವವನ್ನು ಆಸ್ವಾದಿಸುವುದೇ ವಿಶೇಷವಾಗಿತ್ತು. ಶ್ರೀ ವಾಸವಿ ಕನ್ಯಕಾಪರಮೇಶ್ವರಿ ದೇವಿಯು ನಾಗಕನ್ಯೆಯಾಗಿ ಲೋಕ ರಕ್ಷಣೆ ಮಾಡಿದ ಕಿರು ಚಿತ್ರವಂತೂ ರೋಮಾಂಚನವಾಗಿತ್ತು. ನಿರ್ದೇಶಕ ಶ್ರೀ ಲಕ್ಕಿ ಶಂಕರ್‌ರವರ ನಿರ್ದೇಶನದಲ್ಲಿ ಮೂಡಿ ಬಂದಿದ್ದ ಈ ಕಿರು ಚಿತ್ರದ ಸಾಹಿತ್ಯ, ಸಂಗೀತ, ನಿರ್ಮಾಣ ಹೇಗಿತ್ತು ಎಂಬುದನ್ನು ನೋಡಿ , ಕೇಳಿ ಆನಂದಿಸಿದಾಗಲೇ ಅನುಭವ. ಈ ಚಿತ್ರ ನೋಡುತ್ತಾ ಭಾವಪರವಶದಿಂದ ಭಕ್ತರ ಸಂಖ್ಯೆ ಲಕ್ಷಗಳಿಗೂ ಮೀರಿದೆ. ನಾಗಲೋಕದ ಈ ಚಿತ್ರ ಲಕ್ಷ ಲಕ್ಷ ಸಂಖ್ಯೆಯಲ್ಲಿ ಭಕ್ತ ಸಾಗರದ ಮೊಬೈಲ್ ಫೋನ್‌ಗಳನ್ನು ಸೇರಿತು. ಜನಸಾಗರ ನಾಗಲೋಕದ ವೈಭವದ ಜೊತೆಗೆ ಅತ್ಯುತ್ತಮ ಸಂದೇಶ ನೀಡಿದ ಈಗಿನ ಕಾಲಮಾನಕ್ಕೆ ಹತ್ತಿರವಾಗಿರುವ ಕಾಲ್ಪನಿಕ ಚಿತ್ರ ನೋಡಿದ ನಂತರ ಗರ್ಭಗುಡಿಯಲ್ಲಿ ಬೃಹತ್ ಹುತ್ತದ ಒಳಗೆ ಪ್ರತಿನಿತ್ಯ ವಿಶೇಷ ಅಲಂಕಾರಗಳೊಂದಿಗೆ ವಿರಾಜಮಾನವಾಗಿ ಕಂಗೊಳಿಸುತ್ತಿದ್ದ ಶ್ರೀಮಾತೆಯ ದರ್ಶನ ಪಡೆದು ಹೊರ ಬರುತ್ತಾ, ದಕ್ಷಿಣ ಭಾರತದ ನಾನಾ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಭಕ್ತಾದಿಗಳು ಸರತಿಯ ಸಾಲಿನಲ್ಲಿ ನಿಂತು ಪಂಚಹೆಡೆಯ ಸರ್ಪದೊಂದಿಗೆ ಫೋಟೋಗಳನ್ನು ತೆಗೆಸಿಕೊಂಡು ಸಂಭ್ರಮಿಸಿದ ಕ್ಷಣಗಳು ಅವಿಸ್ಮರಣೀಯ, ಅವರ್ಣನೀಯ.

ನಾಗಲೋಕದ ರಮ್ಯರಮಣೀಯ ಸೌಂದರ್ಯ ಸವಿಯುವ ಭಾಗ್ಯ ಒಂದೆಡೆಯಾದರೆ, ರಾಜ್ಯದ ನಾನಾ ಭಾಗಗಳಿಂದ ಕಾರ್ಯಕ್ರಮಕ್ಕೆ ಆಗಮಿಸಿ ತಮ್ಮ ಸಿರಿಕಂಠದ ಗಾಯನ ಮೂಲಕ ದೇವಾಲಯದ ಆವರಣದಲ್ಲಿ ನಿತ್ಯ 18 ಘಂಟೆಗಳ ಕಾಲ ಭಜನಾಮೃತದ ನಾದ ಗಂಗೆಯನ್ನು ಹರಿಸಿ ಭಕ್ತಾದಿಗಳಿಗೆ ಭಕ್ತಿ ಸಂಗೀತ ಹರಿಸಿದ 205 ಭಜನಾ ತಂಡಗಳ ಸೇವೆ ಶ್ಲಾಘನೀಯವಾದದ್ದು. ಪ್ರತಿನಿತ್ಯ 13 ಘಂಟೆಗಳ ಕಾಲ ಜನಸಾಗರದಿಂದ ಕಿಕ್ಕಿರಿದು ಅಬಾಲವೃದ್ಧರಾದಿಯಾಗಿ ದೇವಾಲಯಕ್ಕೆ ಬರುವಂತೆ ಪ್ರೇರೇಪಿಸಿದ ಆಧ್ಯಾತ್ಮಿಕ ಜಗತ್ತಿನ ಅಪರೂಪದ ಕಾರ್ಯಕ್ರದಿಂದ ನಾಗರೀಕ ಪ್ರಪಂಚದಲ್ಲಿ ಭಕ್ತಿ ಸಂಚಲನವಾಯಿತು, ಧರ್ಮ ಜಾಗೃತಿಯಾಗಿ ದೇವತಾರಾಧನೆಯ ಸುನಾಮಿ ಸೃಷ್ಟಿಯಾಯಿತು. ರಾಜ್ಯದೆಲ್ಲೆಡೆ ಇಂತಹ ಉತ್ತಮೋತ್ತಮ ಕಾರ್ಯಕ್ರಮಗಳು ಆಗ್ಗಿಂದ್ದಾಗ್ಗೆ ಮೂಡಿ ಬರುವುದರಿಂದ ಜನಮನದಲ್ಲಿನ ಅರಿಷಡ್ ವರ್ಗಗಳು ನಾಶವಾಗಿ ಸಮೃದ್ಧ ಸಮಾಜ ನಿರ್ಮಾಣಕ್ಕೆ ನಾಂದಿಯಾಗುತ್ತದೆ ಅಲ್ಲವೇ?. . . .



ನಾಗಲೋಕದಲ್ಲಿ ದರ್ಶನ ನೀಡುತ್ತಿರುವ ಬೃಹತ್ ನಾಗ ಸರ್ಪದ ವಿಹಂಗಮ ನೋಟ



ಪ್ರವೇಶ ದ್ವಾರದಲ್ಲಿ ರಾರಾಜಿಸುತ್ತಿರುವ ಪಂಚಹೆಡೆಯ ಸರ್ಪರಾಜ


## ನಾಗಕನ್ಯೆ ಶ್ರೀ ವಾಸವಿ ಯಶಸ್ಸಿನ ಹೆಜ್ಜೆ ಗುರುತು......

> ನಾಗಲೋಕದ ನಿರ್ಮಾಣ 78 ದಿನಗಳು
> ದಕ್ಷಿಣ ಭಾರತದ 50 ಕುಶಲ ಕರ್ಮಿಗಳಿಂದ ಸೇವೆ
> ಪ್ರವೇಶ ದ್ವಾರದಲ್ಲಿ 60 ಅಡಿ ಎತ್ತರದ ಪಂಚಹೆಡೆಗಳ ಬೃಹತ್ ಸರ್ಪ
> 10,000 ಚ.ಅಡಿಗಳ ವಿಸ್ತೀರ್ಣದಲ್ಲಿ ನಾಗಲೋಕ ನಿರ್ಮಾಣ
> 18 ದಿನಗಳು – ಪ್ರತಿನಿತ್ಯ 13 ಘಂಟೆಗಳ ನಿರಂತರ ದರ್ಶನಕ್ಕೆ ಅವಕಾಶ
> 19 ದಿನಗಳ ಶ್ರೀ ಮಾತೆಗೆ 19 ವಿವಿಧ ಅಲಂಕಾರಗಳು
> 1,72,000ಕ್ಕೂ ಮೀರಿದ ಭಕ್ತಾದಿಗಳಿಂದ ದರ್ಶನ
> 175 ಲಕ್ಷಗಳನ್ನು ಮೀರಿದ ಜನತೆಯಿಂದ ಸಾಮಾಜಿಕ ಜಾಲತಾಣದಲ್ಲಿ ವೀಕ್ಷಣೆ
> ದಕ್ಷಿಣ ಭಾರತದಾದ್ಯಂತ ಭಕ್ತಾದಿಗಳ ಆಗಮನ
> 205 ಭಜನಾ ತಂಡಗಳಿಂದ ಭಜನಾಮೃತ
> 10ನೇ ಬ್ರಹ್ಮರಥೋತ್ಸವದ ವಿಜೃಂಭಣೆ
> 250 ಮೀರಿದ ಕೋಲಾಟದ ಕಲಾವಿದರಿಂದ ಸೇವೆ
> ಬ್ರಹ್ಮರಥೋತ್ಸವದ ಸಂದರ್ಭ ಸರಿಸುಮಾರು 500 ಸುಮಂಗಲಿಯರಿಂದ ಶ್ರೀ ಮಾತೆಗೆ ಮಡಲಕ್ಕಿ
> ದಿನಾಂಕ 28/12/2022 ಶ್ರಿ ಸುಬ್ರಮಣ್ಯ ಷಷ್ಠಿ ಆಚರಣೆ ಸುಮಾರು 1150 ಭಕ್ತಾದಿಗಳಿಂದ ಸ್ವಹಸ್ತ ಕ್ಷೀರಾಭಿಷೇಕ
> ವಿಜೃಂಭಣೆಯ ಕುಂಬಾಭಿಷೇಕ
> ವಿದ್ವತ್ ಪೂರ್ಣ ಅರ್ಚಕರಿಂದ ಆಶ್ಲೇಷಬಲಿ ಪೂಜೆ
> ವೈಕುಂಠ ಏಕಾದಶಿ ಪ್ರಯುಕ್ತ ಶ್ರೀ ವೆಂಕಟೇಶ್ವರ ಸ್ವಾಮಿಯ 10 ಅಡಿಗಳ ಬೃಹತ್ ವಿಗ್ರಹ ಅನಾವರಣ
> ಪ್ರತಿನಿತ್ಯ 30,000 ಕ್ಕೂ ಅಧಿಕ ಫೋಟೋಗಳನ್ನು ಕ್ಲಿಕ್ಕಿಸಿದ ಭಕ್ತ ವೃಂದ
> ಸುಮಾರು 10500 ಭಕ್ತಾದಿಗಳಿಂದ ವಿಶೇಷ ದರ್ಶನ

# ಮಾಕಂ ನಾಗರಾಜ ಶ್ರೇಷ್ಠಿರವರ ಜನ್ಮ ಶತಮಾನೋತ್ಸವ

ಮೈಸೂರು ಜಿಲ್ಲೆ ಹುಣಸೂರು ನಗರದ ಪ್ರತಿಷ್ಠಿತ ಉದ್ಯಮಿಯಾಗಿ, ಸೇವಾ ಕಿಂಕರರಾಗಿ, ದಾನಿಗಳಾಗಿ, ಸಾವಿರಾರು ಕುಟುಂಬಗಳಿಗೆ ಆಸರೆಯಾಗಿದ್ದ ಶ್ರೀ ಮಾಕಂ ನಾಗರಾಜ ಶ್ರೇಷ್ಠಿಯವರು ಕರ್ನಾಟಕ ಆರ್ಯವೈಶ್ಯ ಮಹಾಸಭೆಗೆ ಅತ್ಯಂತ ಬೆಲೆಬಾಳುವ 4 ಎಕರೆ ಜಮೀನನ್ನು ವೃದ್ದಾಶ್ರಮ ನಿರ್ಮಾಣಕ್ಕಾಗಿ ದಾನ ಮಾಡಿ ಹೃದಯ ಶ್ರೀಮಂತಿಕೆ ಮೆರೆದಿದ್ದ ಧೀಮಂತರು.

ತಮ್ಮ 96ನೇ ವಯಸ್ಸಿನಲ್ಲಿ ಕೈಲಾಸ ವಾಸಿಗಳಾಗಿರುವ ಶ್ರೀ ಮಾಕಂ ನಾಗರಾಜ ಶ್ರೇಷ್ಠಿಯವರ 100ನೇ ಜನ್ಮ ಶತಾಬ್ದಿಯನ್ನು 08/01/2023 ರಂದು ಹುಣಸೂರಿನ ವಾಸವಿ ವಾನಪ್ರಸ್ತಾಶ್ರಮದಲ್ಲಿ ಶ್ರೀಯುತರ ಪುತ್ಥಳಿಯನ್ನು ಕುಟುಂಬ ಸದಸ್ಯರು ಅನಾವರಣ ಮಾಡಿದರು. ಅನಾವರಣ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶಾಸಕರಾದ ಶ್ರೀ ಹೆಚ್ ಪಿ ಮಂಜುನಾಥ್‌ರವರು ಮಾಕಂ ನಾಗರಾಜ ಶ್ರೇಷ್ಠಿಯವರ ದಾನ ಶ್ರೀಮಂತಿಕೆಯನ್ನು, ಸೇವಾ ಕಾರ್ಯಕ್ರಮಗಳನ್ನು ಕೊಂಡಾಡಿ, ಇವರು ಗಳಿಸಿದ ಬಹುಪಾಲು ಹಣವನ್ನು ದಾನ ಧರ್ಮದೊಂದಿಗೆ ಶಿಕ್ಷಣ, ಆರೋಗ್ಯ ಕ್ಷೇತ್ರಗಳಿಗೆ ನೆರವಾಗಿದ್ದಾರೆ. ಇವರು ಶಿಕ್ಷಣ ಸಂಸ್ಥೆಯನ್ನು ಹುಟ್ಟು ಹಾಕಿ ಸಾವಿರಾರು ಮಕ್ಕಳಿಗೆ ವಿದ್ಯೆ ಕಲ್ಪಿಸಿದ್ದಾರೆ. ಇವರ ನಿಸ್ವಾರ್ಥ ಸೇವೆಗಾಗಿ ಹಲವು ಬಿರುದು ಗಳಿಸಿದ್ದಾರೆ. ನನ್ನ ಮಾರ್ಗದರ್ಶಕರಾಗಿದ್ದ ಇವರು ನನ್ನೆಲ್ಲಾ ಕೆಲಸಗಳಿಗೆ ಬೆನ್ನುತಟ್ಟಿ ಪ್ರೋತ್ಸಾಹಿಸಿದ್ದಾರೆಂದು ಸ್ಮರಿಸಿ, ಇವರ ಹೆಸರಿನಲ್ಲಿ ಅವರ ಕುಟುಂಬಸ್ಥರು ಸಮಾಜಸೇವೆ ಮುಂದುವರೆಸಿರುವುದು ಅಭಿನಂದನೀಯ, ಶ್ರೀಯುತರ ಆದರ್ಶಗಳನ್ನು ಪಾಲಿಸುವ ಮೂಲಕ ಅವರಿಗೆ ಗೌರವ ನೀಡಬೇಕೆಂದು ಕರೆ ನೀಡಿದರು.



ಶ್ರೀ ಮಾಕಂ ನಾಗರಾಜ್‌ಶ್ರೇಷ್ಠಿರವರ ಪ್ರತಿಮೆಯ ಅನಾವರಣ ಮಾಡುತ್ತಿರುವ ಶಾಸಕರಾದ ಶ್ರೀ ಎಚ್ ಪಿ ಮಂಜುನಾಥ್ ಹಾಗೂ ಮಹಾಸಭಾಧ್ಯಕ್ಷರಾದ ಶ್ರೀ ಆರ್ ಪಿ ರವಿಶಂಕರ್

ಕರ್ನಾಟಕ ಆರ್ಯವೈಶ್ಯ ಮಹಾಸಭಾದ ಅಧ್ಯಕ್ಷರಾದ ಶ್ರೀ ಆರ್ ಪಿ ರವಿಶಂಕರ್‌ರವರು ಮಾತನಾಡಿ, ನಾಗರಾಜ ಶ್ರೇಷ್ಠಿಯವರು ಇಡೀ ಆರ್ಯವೈಶ್ಯ ಸಮುದಾಯದ ಕಣ್ಮಣಿಯಾಗಿದ್ದಾರೆ. ಇವರ ಸಮಾಜ ಸೇವೆ ಅಮೋಘವಾದುದು, ಇವರಿಂದ ಸಾಕಷ್ಟು ಮಂದಿ ಪ್ರೇರಣೆಯಾಗಿದ್ದಾರೆ. ಇವರ ನೂರನೇ ಜನ್ಮ ದಿನೋತ್ಸವವನ್ನು ಅರ್ಥಪೂರ್ಣವಾಗಿಸಿದ್ದಾರೆ. ನಾವು ಗಳಿಸಿದ್ದರಲ್ಲಿ ಸಮಾಜಕ್ಕೆ ಕೊಡುಗೆ ನೀಡಿದ್ದೇ ಆದಲ್ಲಿ ಮತ್ತೊಂದು ಕಡೆ ನಮಗೆ ಒಳ್ಳೆಯದಾಗಲಿದೆ ಎಂದು ಹೇಳಿದರು.

ಟ್ರಸ್ಟ್ ಅಧ್ಯಕ್ಷ ಶ್ರೀ ಹೆಚ್ ಎಸ್ ಅಶೋಕ್‌ರವರು ಮಾತನಾಡಿ, ಆದರ್ಶ ಜೀವನ ನಡೆಸಿರುವ ನಾಗರಾಜ ಶ್ರೇಷ್ಠಿಯವರು ತಾವೊಬ್ಬರೇ ಬೆಳೆಯಲಿಲ್ಲ, ತಮ್ಮ ಸುತ್ತಮುತ್ತಲಿನವರನ್ನು ಬೆಳೆಸಿದ್ದಾರೆ. ಶಿಕ್ಷಣ ಸಂಸ್ಥೆ, ಕಣ್ಣಿನ ಆಸ್ಪತ್ರೆ, ವೃದ್ಧಾಶ್ರಮ ಸ್ಥಾಪಿಸಿ ಸಮಾಜಕ್ಕಾಗಿ ತನು ಮನ ಅರ್ಪಿಸಿದ್ದಾರೆ.ಅವರು ಹಾಕಿ ಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಿದ್ದೇವೆ ಎಂದರು.

ಟ್ರಸ್ಟ್ ವತಿಯಿಂದ ಉನ್ನತ ಶಿಕ್ಷಣ ಪಡೆಯುತ್ತಿರುವ ನಾಲ್ವರು ವಿದ್ಯಾರ್ಥಿಗಳಿಗೆ ನೆರವು ನೀಡಲಾಯಿತು. ವಿವಿಧ ಕ್ರೀಡಾ ವಿಜೇತರಿಗೆ ಗಣ್ಯರು ಬಹುಮಾನ ವಿತರಿಸಿದರು. ಆರ್ಯವೈಶ್ಯ ಮಹಾಸಭಾ ಖಜಾಂಚಿ ಶ್ರೀ ಎನ್ ಎಸ್ ಶ್ರೀನಿವಾಸ ಮೂರ್ತಿ, ಟ್ರಸ್ಟ್‌ನ ಉಪಾಧ್ಯಕ್ಷ ಶ್ರೀ ಎಂ ಎಸ್ ನಾಗರಾಜ್, ಕಾರ್ಯದರ್ಶಿ ಹೆಚ್ ಸಿ ಸುದೇಶ್, ಖಜಾಂಚಿ ಶ್ರೀ ಎಂ ಹೆಚ್ ನಿತಿನ್, ಶ್ರೀಮತಿ ರಾಜೇಶ್ವರಿ ಶ್ರೇಯಾಮಾಕಂ ಮಾತನಾಡಿದರು.ಮಾಕಂ ಕುಟುಂಬಸ್ಥರು ಸೇರಿ ನೂರಾರು ಮಂದಿ ಭಾಗವಹಿಸಿದ್ದರು.

# ಅಭಿನಂದನೆಗಳು



ಶ್ರೀ ಎನ್ ಪಿ ನಾಗೇಂದ್ರ ಬಾಬು

ಸರಿಸುಮಾರು 20 ವರ್ಷಗಳಿಂದ ಕರ್ನಾಟಕ ಪೌರರಕ್ಷಣಾದಳದಲ್ಲಿ ತೊಡಗಿಸಿಕೊಂಡು ಕಾರ್ಯನಿರ್ವಹಿಸುತ್ತಿರುವ **ಶ್ರೀ ಎನ್ ಪಿ ನಾಗೇಂದ್ರ ಬಾಬುರವರು** ಪೌರರಕ್ಷಣಾದಳದ ಆಫೀಸರ್ ಕಮಾಂಡಿಂಗ್ ವಾರ್ಡನ್‌ರಂತಹ ಪ್ರಮುಖ ಸೇವೆಗೆ ಘನ ಸರ್ಕಾರದಿಂದ ನೇಮಕವಾಗಿರುತ್ತಾರೆ. 2014ರಲ್ಲಿ ಮುಖ್ಯಮಂತ್ರಿಗಳ ಚಿನ್ನದಪದಕ, 2020ರಲ್ಲಿ ರಾಷ್ಟ್ರಪತಿಗಳ ಪದಕಕ್ಕೆ ಪುರಸ್ಕೃತರಾಗಿರುತ್ತಾರೆ. ಮಾನ್ಯ ಘನಸರ್ಕಾರ ನೀಡಿರುವ ಜವಾಬ್ದಾರಿಯನ್ನು ಅತ್ಯಂತ ಅರ್ಥಪೂರ್ಣವಾಗಿ, ಪರಿಣಾಮಕಾರಿಯಾಗಿ ನಿರ್ವಹಿಸಿ ಕರ್ನಾಟಕ ಪೌರರಕ್ಷಣಾದಳದ ಕೀರ್ತಿಯನ್ನು ಉತ್ತುಂಗಕ್ಕೇರಿಸಲೆಂದು ಕರ್ನಾಟಕ ಆರ್ಯವೈಶ್ಯ ಮಹಾಸಭೆ ಆಶಿಸಿ, ಅಭಿನಂದಿಸುತ್ತದೆ.

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಪ್ಲಾಸ್ಟಿಕ್ ಸರ್ಜರಿ ವಿಭಾಗದಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿರುವ **ಡಾ. ಸ್ಮಿತಾ ಸೇಗು**ರವರನ್ನು ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರನ್ನಾಗಿ ಮಾನ್ಯಘನ ಸರ್ಕಾರವು ನಾಮನಿರ್ದೇಶನ ಮಾಡಿ 12.12.2022 ರಂದು ಅಧಿಸೂಚನೆ ಹೊರಡಿಸಿದೆ. ಇವರ ಸೇವಾ ಅವಧಿಯಲ್ಲಿ ಉತ್ತಮ ಕೆಲಸ ಕಾರ್ಯಗಳು ನಡೆಯಲೆಂದು ಕರ್ನಾಟಕ ಆರ್ಯವೈಶ್ಯ ಮಹಾಸಭೆ ಆಶಿಸಿ, ಅಭಿನಂದಿಸುತ್ತದೆ.



ಡಾ. ಸ್ಮಿತಾ ಸೇಗು



ಶ್ರೀಮತಿ ಶೋಭ ವಿಶ್ವನಾಥ್

ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕಿನ ಗೌರಿಪುರ ಗ್ರಾಮಪಂಚಾಯಿತಿ ಸದಸ್ಯರಾಗಿರುವ **ಶ್ರೀಮತಿ ಶೋಭ ವಿಶ್ವನಾಥ್**ರವರು ಜಗಳೂರು ತಾಲ್ಲೂಕಿನ ಗ್ರಾಮ ಪಂಚಾಯಿತಿಗಳ ಒಕ್ಕೂಟದ ಅಧ್ಯಕ್ಷರಾಗಿ ನೇಮಕವಾಗಿದ್ದಾರೆ. ಇವರ ಕಾರ್ಯಾವಧಿಯಲ್ಲಿ ಪ್ರತಿಯೊಂದು ಗ್ರಾಮ ಪಂಚಾಯಿತಿಗಳು ಉತ್ತಮವಾಗಿ ಕಾರ್ಯನಿರ್ವಹಿಸಿ ಜನಮನಕ್ಕೆ ಹತ್ತಿರವಾಗಲೆಂದು ಆಶಿಸಿ, ಇವರ ನೇಮಕವನ್ನು ಕರ್ನಾಟಕ ಆರ್ಯವೈಶ್ಯ ಮಹಾಸಭೆ ಅಭಿನಂದಿಸುತ್ತದೆ.



**ಮಹಾಸಭೆಯ ವಾಸವಿ ಗೋಶಾಲೆಗೆ ಹಸುಗಳನ್ನು ನೀಡಿ ಗೋಶಾಲೆಯ ಅಭಿವೃದ್ಧಿಗೆ ಸಹಕರಿಸಿದ ದಾನಿಗಳು**

1. ಕಂಟೋನ್ಮೆಂಟ್ ವಾಸವಿ ಮಹಿಳಾ ಮಂಡಳಿ, ಬೆಂಗಳೂರು–1
2. ಶ್ರೀ ಹೆಚ್ ಎ ಸುಂದರಂ, ಬೆಂಗಳೂರು

ಇವರ ಸೇವೆಯನ್ನು ಕರ್ನಾಟಕ ಆರ್ಯವೈಶ್ಯ ಮಹಾಸಭೆ ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

**ಅಧ್ಯಕ್ಷರ ನುಡಿ**

ಯಾವುದೂ ಇರುವುದಿಲ್ಲ. ಹಿರಿಯರು ನೀಡಿದ ಮಾರ್ಗದರ್ಶನಗಳ ಸೂಕ್ಷ್ಮತೆಯನ್ನು ಅರ್ಥ ಮಾಡಿಕೊಂಡು ಸಂಬಂಧಗಳ ಪಾವಿತ್ರತೆಯನ್ನು ರಕ್ಷಿಸಿಕೊಂಡು, ಸಮಾಜ ಕಂಟಕರಾಗದೆ, ಹೊಣೆಗಾರಿಕೆಯಿಂದ ವರ್ತಿಸಿದಾಗ ಮಾತ್ರ ಸಂಬಂಧಗಳು ಹಾಳಾಗುವ ಪ್ರಮೇಯವಿರುವುದಿಲ್ಲ. ಯಾರೂ ಪರಿಪೂರ್ಣರಲ್ಲ. ಎಲ್ಲರಲ್ಲೂ ಒಂದಲ್ಲ ಒಂದು ಕೊರತೆ ಇದ್ದೇ ಇರುತ್ತದೆ ಎಂಬ ಅರಿವು ಸದಾ ನಮ್ಮ ಪ್ರಜ್ಞೆಯಲ್ಲಿ ಇದ್ದರೆ ಸಾಕು.

ಜಗತ್ತಿನ ಅತೀ ದೊಡ್ಡ ಆಸ್ತಿ ಎಂದರೇ ಪ್ರೀತಿ, ಸ್ನೇಹ, ವಿಶ್ವಾಸ, ನಂಬಿಕೆ, ಆರೋಗ್ಯ. ಇವು ಚೆನ್ನಾಗಿದ್ದರೆ ಜಗತ್ತಿನ ಯಾವುದೇ ಆಸ್ತಿಯನ್ನು ಬೇಕಾದರೂ ಖರೀದಿಸಬಹುದು.

ಮನದಲ್ಲಿ ನೆಮ್ಮದಿ ಇದ್ದರೆ ಮನೆಯಲ್ಲಿ ನೆಮ್ಮದಿ, ಮನೆಯಲ್ಲಿ ನೆಮ್ಮದಿ ಇದ್ದರೆ ಸಮಾಜದಲ್ಲಿ ನೆಮ್ಮದಿ
ನೆಮ್ಮದಿಯ ಬದುಕು ಅರ್ಥಪೂರ್ಣ ಬದುಕು ಅಂತಹ ನೆಮ್ಮದಿಯ ಬದುಕು ತಮ್ಮದಾಗಲೆಂದು ಶುಭ ಹಾರೈಸುವ

ರಾ.ಪ.ರವಿಶಂಕರ್
ಅಧ್ಯಕ್ಷರು

# ಅಮರಜ್ಯೋತಿ ಯೋಜನೆ

## ಸದಸ್ಯತ್ವಕ್ಕೆ ಆಹ್ವಾನ

2018 ರಿಂದ ಕಾರ್ಯನಿರ್ವಹಿಸುತ್ತಿರುವ ಮಹಾಸಭೆಯ ವೈಶಿಷ್ಟಪೂರ್ಣ ಯೋಜನೆ ಅಮರಜ್ಯೋತಿ. ಈ ಯೋಜನೆ ಸಾವಿರಾರು ಮನೆಗಳಲ್ಲಿ ಬೆಳಕು ನೀಡುವ ದೂರದೃಷ್ಟಿಯ ಹೃದಯಸ್ಪರ್ಶಿ ಯೋಜನೆ. ಈಗಾಗಲೇ ಸುಮಾರು 1.75 ಕೋಟಿ ರೂಪಾಯಿಗಳ ಪರಿಹಾರ ಧನವನ್ನು ವಿತರಿಸಲಾಗಿದೆ.

**ಸದಸ್ಯರಿಂದ ಸದಸ್ಯರಿಗಾಗಿ**

ಎಂಬ ಪರಿಕಲ್ಪನೆಯೊಂದಿಗೆ ಕಾರ್ಯನಿರ್ವಹಿಸುತ್ತಿರುವ ಈ ಯೋಜನೆಗೆ ಹೊಸದಾಗಿ ಸದಸ್ಯತ್ವ ನೀಡಲು ಮಹಾಸಭೆ ತೀರ್ಮಾನಿಸಿದೆ.

★ ಅಮರಜ್ಯೋತಿ ಸದಸ್ಯರಾಗಲು ಕೇವಲ 3000 ರೂಪಾಯಿಗಳನ್ನು ವಿನಿಯೋಗಿಸಬೇಕು.

★ ರೂ. 3000 ಗಳಲ್ಲಿ ರೂ. 2500 ತಮ್ಮ ಖಾತೆಯಲ್ಲಿಯೇ ಶೇವಣಿ ಇರುತ್ತದೆ.

★ ರೂ. 500 ಆಡಳಿತಾತ್ಮಕ ವೆಚ್ಚಗಳಿಗಾಗಿ ತೆಗೆದುಕೊಳ್ಳಲಾಗುತ್ತದೆ.

★ ಯಾವುದೇ ಸದಸ್ಯರು ಮರಣ ಹೊಂದಿದರೆ ಕ್ರಿಯಾಶೀಲ ಸದಸ್ಯರ ಖಾತೆಯಿಂದ 100 ರೂಪಾಯಿಗಳನ್ನು ಕಡಿತಗೊಳಿಸಿ ಗರಿಷ್ಠ 5 ಲಕ್ಷ ರೂಪಾಯಿಗಳ ವರೆವಿಗೂ ಮೃತ ಸದಸ್ಯರ ನಾಮಿನಿಗೆ ಸಾಂತ್ವನ ರೂಪದ ಪರಿಹಾರವನ್ನು ನೀಡಲಾಗುತ್ತದೆ.

★ ಪ್ರತಿಯೊಂದು ಸಾವಿನ ಘಟನೆಗಳ ಬಗ್ಗೆ ಮತ್ತು ಸದಸ್ಯರ ಖಾತೆಗಳಿಂದ ಕಡಿತವಾಗಿರುವ ಮೊತ್ತದ ಬಗ್ಗೆ ಆಗಿಂದಾಗ್ಗೆ ಮಾಹಿತಿಗಳನ್ನು ತಾವು ನೋಂದಾಯಿಸಿರುವ ಮೊಬೈಲ್ ಸಂಖ್ಯೆಗೆ ಎಸ್.ಎಮ್.ಎಸ್ ಮೂಲಕ ನೀಡಲಾಗುತ್ತದೆ.

### ಸದಸ್ಯತ್ವಕ್ಕೆ ಅರ್ಹತೆ:

> ವಯೋಮಿತಿ 20 ರಿಂದ 60 ವರ್ಷದೊಳಗಿರಬೇಕು.

> ಮಹಾಸಭೆಯ ಸದಸ್ಯರಾಗಿರಬೇಕು, ಇಲ್ಲವೇ ಸದಸ್ಯತ್ವವನ್ನು ಪಡೆದುಕೊಂಡ ನಂತರ ಅಮರಜ್ಯೋತಿ ಯೋಜನೆಯ ಸದಸ್ಯರಾಗಬಹುದು.

> ಸದಸ್ಯತ್ವ ಪಡೆಯುವ 3 ವರ್ಷಕ್ಕೆ ಮೊದಲು ಯಾವುದೇ ಮಾರಣಾಂತಿಕ ಖಾಯಿಲೆಗಳಿಗೆ ಒಳಗಾಗಿರಬಾರದು.

> ತಮ್ಮ ಖಾತೆಯಿಂದ ಕಡಿತವಾದ ಮೊತ್ತವನ್ನು ಆಗಿಂದಾಗ್ಗೆ ತುಂಬಲು ಅಮರಜ್ಯೋತಿ **app** ಅಥವಾ ಅಮರಜ್ಯೋತಿ ಖಾತೆಗೆ ನೇರವಾಗಿ ವರ್ಗಾವಣೆ ಮಾಡಲು ಅವಕಾಶವಿದೆ.

> ತಮ್ಮ ಖಾತೆಯ ಆಗ್ಗಿಂದಾಗಿನ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಅಮರಜ್ಯೋತಿ **app** ಅನ್ನು ಬಳಸಿ.

> ಅಮರಜ್ಯೋತಿ ಸದಸ್ಯರಾಗಲು ಅರ್ಜಿಗಳನ್ನು ಮಹಾಸಭಾ ವೆಬ್‌ಸೈಟ್ **www.kavms.com** ಮೂಲಕ ಪಡೆದುಕೊಳ್ಳಲು ಅವಕಾಶವಿದೆ.

> ಹೆಚ್ಚಿನ ವಿವರಗಳಿಗಾಗಿ ನಿಮ್ಮ ಜಿಲ್ಲೆಯಲ್ಲಿರುವ ಮಹಾಸಭಾ ಕಾರ್ಯಕಾರಿ ಸಮಿತಿ/ಜಿಲ್ಲಾ ಸಮಿತಿ ಸದಸ್ಯರನ್ನು/ಮಹಾಸಭೆ ದೂರವಾಣಿ ಸಂಖ್ಯೆ: 9663900439 ನ್ನು ಸಂಪರ್ಕಿಸಲು ಕೋರಿದೆ.

**ನಮ್ಮ ನಂತರ ನಾವು ಇಚ್ಚಿಸಿದ ವ್ಯಕ್ತಿಗಳಿಗೆ ಆರ್ಥಿಕ ಶಕ್ತಿಗಳನ್ನು ತುಂಬುವ ಅತ್ಯುತ್ತಮ ಯೋಜನೆ**

**ಸದಸ್ಯರಾಗಲು ಕೊನೆಯ ದಿನಾಂಕ: 31.01.2023 ಕೇವಲ 2000 ಜನಗಳಿಗೆ ಮಾತ್ರ ಅವಕಾಶವಿದೆ.**

# ಮಹಿಳಾ ಸಬಲೀಕರಣ

**ಸಮಿತಿಯಲ್ಲಿ ಕಾರ್ಯನಿರ್ವಹಿಸಲು ಆಸಕ್ತಿ ಇದೆಯೇ? ಹಾಗಿದ್ದಲ್ಲಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ.**

ಜಾಗೃತ ಮಹಿಳೆ ಈ ದೇಶದ ಆಸ್ತಿ, ಮಹಿಳಾ ಶಕ್ತಿಯನ್ನು ಒಗ್ಗೂಡಿಸಿ ಮಹಿಳೆಯರಲ್ಲಿ ಉದ್ಯೋಗಾಸಕ್ತಿಗಳನ್ನು ತುಂಬಿ ಅವರಲ್ಲಿರುವ ಜ್ಞಾನವನ್ನು ಜಾಗೃತಗೊಳಿಸಿ ತನ್ಮೂಲಕ ಯಶಸ್ವಿ ಉದ್ಯಮಿಯಾಗಿ ಬೆಳೆಯಲು ಅವಶ್ಯವಿರುವ ಮಾರ್ಗದರ್ಶನಗಳನ್ನು, ಸಂಪನ್ಮೂಲ ಕ್ರೋಢೀಕರಣ ಹಾಗೂ ಸಲಹೆಗಳನ್ನು ನೀಡಿ ಬೆಳೆಸಲು ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಆಶ್ರಯದಲ್ಲಿ **ಮಹಿಳಾ ಸಬಲೀಕರಣ ಘಟಕ** ವನ್ನು ಪ್ರಾರಂಭಿಸಲು ಇಚ್ಚಿಸಿದೆ.

ರಾಜ್ಯ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಪ್ರತ್ಯೇಕ ಸಮಿತಿಯನ್ನು ರಚಿಸಲು ಆಸಕ್ತಿಯನ್ನು ಮಹಾಸಭೆ ಹೊಂದಿದೆ. ಈಗಾಗಲೇ ವ್ಯಾಪಾರ, ವ್ಯವಹಾರ, ವಾಣಿಜ್ಯೋದ್ಯಮ,

ಕೈಗಾರಿಕೋದ್ಯಮಗಳಲ್ಲಿ ತೊಡಗಿಸಿಕೊಂಡಿರುವ ಆಸಕ್ತ ಮಹಿಳೆಯರು ದಯಮಾಡಿ ತಮ್ಮ ಹೆಸರನ್ನು ಮಹಾಸಭೆಯ ವೆಬ್‌ಸೈಟ್ **www.kavms.com**ನಲ್ಲಿ ಲಭ್ಯವಿರುವ ಅರ್ಜಿಯಲ್ಲಿ ನೋಂದಾಯಿಸಿಕೊಳ್ಳಲು ಕೋರಿದೆ.

**ನೊಂದಾಯಿಸಲು ಕೊನೆಯ ದಿನಾಂಕ 31–01–2023**

ಮುದ್ರಕರು: ಗಿರೀಶ್ ಪ್ರಿಂಟರ್ಸ್, 163, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020 ಇ–ಮೇಲ್ : info@gireeshprinters.com website : www.gireeshprinters.com
ಸಂಪಾದಕರು: ರಾ.ಪ. ರವಿಶಂಕರ್ ಮತ್ತು ಪ್ರಕಾಶಕರು: ಎಸ್ ಕೆ. ಶೇಷಾಚಲ ವಾರ್ತಾಪತ್ರ ಸಮಿತಿಯ ಚೇರ್‌ಮನ್, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಪರವಾಗಿ, 16, ಶೇಷಾದ್ರಿರಸ್ತೆ, ಗಾಂಧಿನಗರ, ಬೆಂಗಳೂರು–09 ಫೋನ್: 22206151/22206152